**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 290/2020 ಸಿ.ಡಬ್ಲೂ.10 ಪಿ.ಡಬ್ಲೂ.9

| | |
|---|---|
| ಹೆಸರು | ತುಳಜಮ್ಮ |
| ತಂದೆ/ಗಂಡ | ಬಸವರಾಜ |
| ವಯಸ್ಸು | 47ವರ್ಷ |
| ಉದ್ಯೋಗ | ಡಬ್ಲೂ.ಎಚ್.ಸಿ |
| ವಾಸಸ್ಥಳ | ಅಫಜಲಪೂರ |

ದಿನಾಂಕ 22-11-2025
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು 2011 ರಿಂದ 2021 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಡಬ್ಲೂ.ಎಚ್.ಸಿ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11-03-2020 ರಂದು ಮ. 3.30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಟೈಪ ಮಾಡಿದ ದೂರನ್ನು ಸಲ್ಲಿಸಿದ್ದು, ಅದರ ಸಾರಾಂಶದ ಮೇರೆಗೆ ಗುನ್ಹಾ ಸಂಖ್ಯೆ 34/2020 ಅಂತಾ ದಾಖಲು ಮಾಡಿಕೊಂಡು ಪ್ರ.ವ.ವ.ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿ, ಅದೇ ದಿನ ಗುನ್ಹಾ ಸ್ಥಳಕ್ಕೆ ಭೇಟಿ ಕೊಟ್ಟು 5.15 ರಿಂದ 6.15 ರವರೆಗೆ ಚಾಸಾ2 ಮತ್ತು 3 ರವರ ಸಮಕ್ಷಮ ಗುನ್ಹಾ ಸ್ಥಳದ ಪಂಚನಾಮೆಯನ್ನು ತಯಾರಿಸಿ, ಠಾಣೆಗೆ ಬಂದು ಚಾಸಾ 4 ರಿಂದ 9 ರವರ ಹೇಳಿಕೆ ಮತ್ತು ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 19-05-2020 ರಂದು ಆರೋಪಿತರು ಮಾನ್ಯ ಸತ್ರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ಕಾರಣ ಅವರನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 07-06-2020 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1ಬಿ ಅಂತಾ ಗುರುತಿಸಲಾಯಿತು. ಸಾಕ್ಷಿಯು ಪ್ರ. ವ.ವ.ವರದಿಯೇಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6, ಸಾಕ್ಷಿಯ ಸಹಿಯನ್ನು ನಿಪಿ. 6 ಎ ಎಂದು ಗುರುತಿಸಲಾಯಿತು, ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಬಿ ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ    ವಕೀಲರಿಂದ:</u>

ನಾನು ಚಾಸಾ 1 ರವರಿಗೆ ತಡವಾಗಿ ದೂರು ನೀಡಿದ್ದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಚಾಸಾ 1 ರವರು ನನಗೆ ಮನೆ ಬಿಟ್ಟು ಹೋಗಲು ಎರಡು ದಿನ ಸಮಯ ಬೇಕು ಅಂತಾ ಮನವಿ ಮಾಡಿಕೊಂಡಿದ್ದು ನಂತರ ದಿಃ 11-03-2020 ರಂದು ಮನೆಯಲ್ಲಿ ಯಾರು ಇಲ್ಲದಾಗ ದೂರನ್ನು ಸಲ್ಲಿಸಿರುತ್ತೇನೆ ಅಂತಾ ತಿಳಿಸಿರುತ್ತಾರೆ ಅಂತಾ ನುಡಿಯುತ್ತಾರೆ. ನಿಪಿ. 6 ರ ಕಾಲಂ ನಂಬರ 3(ಸಿ) ಯಲ್ಲಿ ಕಾರಣಗಳನ್ನು ನಮೂದಿಸಿಲ್ಲ ಎಂದರೆ ಸರಿ. ಚಾಸಾ 1 ರವರ ಪುರವಣಿ ಹೇಳಿಕೆಯನ್ನು ನಾನು ನಮ್ಮ ಠಾಣೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಮೇಲೆ ಬೆಣ್ಣೆ ಶಿರೂರ ಗ್ರಾಮದಲ್ಲಿ ನಮೂದು ಮಾಡಿರುತ್ತೇನೆ ಅಂತಾ ನಮೂದು ಇರುತ್ತದೆ ಎಂದರೆ ಸಾಕ್ಷಿಯು ತಪ್ಪಾಗಿ ಟೈಪ ಮಾಡಿರುತ್ತಾರೆ ಅಂತಾ ನುಡಿಯುತ್ತಾರೆ. ನಿಪಿ. 2 ರ ಕಾಲಂ ನಂಬರ 10 ದಿಕ್ಕುಗಳನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಕಾಲಂ ನಂಬರ 8 ರಲ್ಲಿ ನಮೂದಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಕಾಲಂ ನಂಬರ 10 ರಲ್ಲಿ ದಿಕ್ಕುಗಳನ್ನು ತೋರಿಸಿರಲಿಲ್ಲ ಎಂದರೆ ಅದು ಅಪೂರ್ಣಗೊಳ್ಳುತ್ತದೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಭಾವಚಿತ್ರಗಳನ್ನು ತೆಗೆದಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಠಾಣೆಯಲ್ಲಿ ಕ್ಯಾಮೇರಾ ಇರಲಿಲ್ಲ ಅಂತಾ ನುಡಿಯುತ್ತಾರೆ. ನಾನು ಗುನ್ಹಾ ಸ್ಥಳಕ್ಕೆ ಭೇಟಿ ನೀಡಿಲ್ಲ ಆದ್ದರಿಂದ ನಾನು ಭಾವಚಿತ್ರಗಳನ್ನು ತೆಗೆದಿಲ್ಲ ಅಂತಾ ನುಡಿಯುತ್ತಾರೆ. ಚಾಸಾ 7 ರಿಂದ 9 ರವರ ಹೇಳಿಕೆಗಳನ್ನು ನಾನು ಬೆಣ್ಣೆ ಶಿರೂರು ಗ್ರಾಮಕ್ಕೆ ಹೋಗದೇ ಠಾಣೆಯಲ್ಲಿಯೇ ತೆಗೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯ ಅವರು ಠಾಣೆಗೆ ಬಂದ ಕಾರಣ ಠಾಣೆಯಲ್ಲಿಯೇ ತೆಗೆದುಕೊಂಡಿರುತ್ತೇನೆ ಅಂತಾ ನುಡಿಯುತ್ತಾರೆ.

2. ಚಾಸಾ 1 ಮತ್ತು 1ನೇ ಆರೋಪಿಯು 2015 ನೇ ಇಸವಿಯಲ್ಲಿ ಪ್ರೀತಿಸಿ, ಆಳಂದದ ಅಂಬಾ-ಭವಾನಿ ದೇವಸ್ಥಾನದಲ್ಲಿ ಮದುವೆ ಆಗಿರುತ್ತಾರೆ ಮತ್ತು ಅವರಿಗೆ ಒಂದು ಗಂಡು ಮಗು ಇರುತ್ತದೆ ಎಂದರೆ ಸರಿ. ಎರಡು ಮನೆ ಕಡೆಯವರು ಸೇರಿ ಗುರು ಹಿರಿಯರ ಸಮಕ್ಷಮ ಮದುವೆ ಮಾಡಿರುತ್ತಾರೆ ಎಂದರೆ ಸರಿ. ಮದುವೆ ನಂತರ ಚಾಸಾ 1 ರವರು 3-4 ವರ್ಷಗಳ ಕಾಲ ಆರೋಪಿಯ ಮನೆಯಲ್ಲಿ ಚೆನ್ನಾಗಿ ಇದ್ದರು ಎಂದರೆ ಸರಿ. ಚಾಸಾ 1 ರವರಿಗೆ 2 ರಿಂದ 4 ನೇ ಆರೋಪಿಯರ ವಿರುದ್ಧ ವೈಮನಸ್ಸು ಇತ್ತು ಅಂತಾ ನನ್ನ ತನಿಖಾ ಕಾಲದಲ್ಲಿ ಕಂಡು ಬಂದಿರುವುದಿಲ್ಲ. 1ನೇ ಆರೋಪಿಯು ಚಾಸಾ 1 ರವರನ್ನು ಮನೆ ಕರೆದುಕೊಂಡು ಹೋಗಲು ತಯಾರು ಇದ್ದರು ಸಹಿತ ಚಾಸಾ 1 ರವರು ನಿರಾಕರಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಅದರ ಬಗ್ಗೆ ವಿಚಾರಣೆ ಮಾಡಿಲ್ಲ ಅಂತಾ ನುಡಿಯುತ್ತಾರೆ. ಚಾಸಾ 1 ರವರಿಗೆ ಆರೋಪಿತರ ಮನೆಯವರ ವಿರುದ್ದ ವೈಮನಸ್ಸು ಇದ್ದ ಕಾರಣ ಚಾಸಾ 5 ಮತ್ತು ಅವರ ಮನೆಯವರು ಆರೋಪಿತರ ಮನೆಗೆ ಹೋಗಿ ಹೊಡೆ ಬಡೆ ಮಾಡಿದ್ದು, ಅವರ ವಿರುದ್ದ ಸಹ ಒಂದು ಪ್ರಕರಣ ದಾಖಲಾಗಿರುತ್ತದೆ ಅಂತಾ ನನಗೆ ಗೊತ್ತಿಲ್ಲ. ಚಾಸಾ 1 ರವರು ಮುಂಚೆ ಆದ ಗಲಾಟೆಗಳ ಬಗ್ಗೆ ಪ್ರಕರಣವನ್ನು ದಾಖಲಿಸಿರುವುದಿಲ್ಲ. ದೂರು ನೀಡುವುದಕ್ಕಿಂತ ಮುಂಚೆ ಯಾವ ಯಾವ ದಿನಾಂಕಗಳಂದು ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದರು ಅಂತಾ ಅವರು ಹೇಳಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಚಾಸಾ 1 ರವರ ಮೈಮೇಲೆ ಯಾವುದೇ ಗಾಯ ಕಂಡು ಬಂದಿರುವುದಿಲ್ಲ ಎಂದರೆ ಸರಿ. ಚಾಸಾ 1 ರವರು ಆರೋಪಿತರಿಗೆ ತೊಂದರೆ ಕೊಡುವ ಕಾರಣ ಒಂದು ಸುಳ್ಳು ಪ್ರಕರಣ ದಾಖಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 2011 ರಿಂದ 2021 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಡಬ್ಲ್ಯೂ.ಎಚ್.ಸಿ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 11-03-2020 ರಂದು ಮ. 3.30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಟೈಪ ಮಾಡಿದ ದೂರನ್ನು ಸಲ್ಲಿಸಿದ್ದು, ಅದರ ಸಾರಾಂಶದ ಮೇರೆಗೆ ಗುನ್ಹಾ ಸಂಖ್ಯೆ 34/2020 ಅಂತಾ ದಾಖಲು ಮಾಡಿಕೊಂಡು ಪ್ರ.ವ.ವ.ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿ, ಅದೇ ದಿನ ಗುನ್ಹಾ ಸ್ಥಳಕ್ಕೆ ಭೇಟಿ ಕೊಟ್ಟು 5.15 ರಿಂದ 6.15 ರವರೆಗೆ ಚಾಸಾ2 ಮತ್ತು 3 ರವರ ಸಮಕ್ಷಮ ಗುನ್ಹಾ ಸ್ಥಳದ ಪಂಚನಾಮೆಯನ್ನು ತಯಾರಿಸಿ, ಠಾಣೆಗೆ ಬಂದು ಚಾಸಾ 4 ರಿಂದ 9 ರವರ ಹೇಳಿಕೆ ಮತ್ತು ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 19-05-2020 ರಂದು ಆರೋಪಿತರು ಮಾನ್ಯ ಸತ್ರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ಕಾರಣ ಅವರನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 07-06-2020 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ